ಸಭೆಯನ್ನು ಕರೆಸಿ ಒಂದು ಸಭೆ ಮಾಡಬೇಕಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ನಾವು ಈಗ ಆಲ್ಲಿರತಕ್ಕ ಕೊಡಸಳ್ಳಿ ಯೋಜನೆ ಏನು ಇದೆ, ಆ ಒಂದು ಯೋಜನೆಗೆ ಸಂಬಂಧಪಟ್ಟಂತೆ ನಾವು ಈಗಿರತಕ್ಕ ಸಮಿತಿದೆ ಆದೇಶ ಕೊಡುತ್ತೇವೆ. ಅಲ್ಲಿ ಏನಾದರೂ ತೊಂದರೆ ಬಂದರೆ ಪರಿಹಾರ ಮಾಡಲು ಆದೇಶ ನೀಡುತ್ತೇನೆ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಈ ವಿಚಾರದಲ್ಲಿ ಏನು ತಕರಾರು ಮಾಡಿದ್ದಾರೆ, ಅವರೇನು ಸೆಂಟ್ರಲ್ ಆಕ್ಟ್ ಕೆಳಗಡೆ ತಕರಾರು ಹೂಡಿದ್ದಾರೆ, ಫಾರೆಸ್ಟ್ ಕನ್ಸರ್ವೇಷನ್ ಆಕ್ಟ್ ಪ್ರಕಾರ ಅವರು ತಕರಾರು ಎತ್ತಿದ್ದಾರೆ, ಅದನ್ನು ನಾವು ತೀರ್ಮಾನ ಮಾಡಬೇಕು. ಬೇರೆ ಬೇರೆ ಕಡೆ ಕೂಡ ಇದೇ ಪರಿಸ್ಥಿತಿ ಬಂದಿದೆ. ಅದನ್ನೂ ನೋಡೋಣ.

ಶ್ರೀ ಆರ್.ವಿ. ದೇಶಪಾಂಡೆ : ಗವರ್ನಮೆಂಟ್ ಆರ್ಡರ್ ಬೆಂಗಳೂರಿನಲ್ಲಿ ಇಶ್ಯೂ ಮಾಡಿದೆ. ಈ ಸಮಸ್ಯೆಯನ್ನು ಬೆಂಗಳೂರಿನಲ್ಲಿಯೇ ಬಗೆಹರಿಸಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ನಾನು ಇದರ ಬಗ್ಗೆ ವಿಚಾರ ಮಾಡಿ ಬಗೆಹರಿಸುತ್ತೇನೆ.

ನೊಂದಾವಣಿ ಆಗಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆಯ ಬಗ್ಗೆ

2796 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರದಲ್ಲಿ ಸಹಕಾರ ಕಾಯಿದೆ ಅನ್ವಯ ನೊಂದಾವಣಿಯಾಗಿರುವ ಗೃಹ ನಿರ್ಮಾಣ ಸಹಕಾರ ಸಂಘಗಳೆಷ್ಟು?

ಆ) ಇವುಗಳಲ್ಲಿ ಸರ್ಕಾರದವರು ಸೂಪರ್ ಸೀಡ್ ಮಾಡಿರುವ ಸಹಕಾರ ಸಂಘಗಳ ಹೆಸರುಗಳೇನು?

ಇ) ಅಂತಹ ಸಹಕಾರ ಸಂಘಗಳಲ್ಲಿ ಸದಸ್ಯರು ಹೂಡಿರುವ ಹಣದ ಮೊತ್ತವೆಷ್ಟು?

ಈ) ಸೂಪರ್‌ಸೀಡ್ ಆದ ಸಂಘಗಳಿಂದ ಅದರ ಷೇರುದಾರರಿಗೆ ಹಣ ವಾಪಸ್ಸು ಕೊಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಆರ್. ಮೋರೆ, (ಸಹಕಾರ ರಾಜ್ಯ ಸಚಿವರು) :

ಅ) 423.

ಆ) 1) ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘ ನಿ.

2) ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘ.

3) ಎನ್.ಟಿ.ಐ ಗೃಹ ನಿರ್ಮಾಣ ಸಹಕಾರ ಸಂಘ.

4) ಮಂಜುನಾಥನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.

5) ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.

6) ಅಮರ ಜ್ಯೋತಿ ಗೃಹ ನಿರ್ಮಾಣ ಸಹಕಾರ ಸಂಘ ನಿ.

ಇ) ರೂ. 64,57,88,840-00.

ಈ) ಸದಸ್ಯರ ಮನವಿಗಳ ಮೇಲೆ ಬೈಲಾಗಳ ರೀತಿ ಠೇವಣಿ ಹಿಂದಿರುಗಿಸುವ ಅವಕಾಶ ಇರುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 64.57 ಕೋಟಿ ರೂಪಾಯಿಗಳು ಈ ಸೂಪರ್‌ಸೀಡ್ ಆಗಿರುವ ಸಹಕಾರ ಸಂಘಗಳಲ್ಲಿ ಇನ್‌ವಾಲ್ವ್ ಆಗಿದೆ ಎಂದು ಹೇಳಿದ್ದೀರಿ. ಮತ್ತೆ ಇನ್ನೊಂದು ಉತ್ತರದಲ್ಲಿ ಸನ್ಮಾನ್ಯ ಸಚಿವರು ಸದಸ್ಯರ ಮನವಿಗಳ ಮೇಲೆ ಠೇವಣಿ ಹಣ ಹಿಂದುರಿಗಿಸುವ ಅವಕಾಶವಿದೆ ಎಂದು ಹೇಳಿದ್ದೀರಿ. ಅದು ಇದೆ. ಅದು ನಮಗೆ ಗೊತ್ತಿದೆ. ಆದರೆ ಅನೇಕ ಜನ ನಮ್ಮ ಹತ್ತಿರ ಬಂದು ನಮ್ಮ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ. ಒಂದು ಕಾಸೂ ಅಲ್ಲಿ ಇಲ್ಲ, ಅದಕ್ಕೋಸ್ಕರವಾಗಿ ನಮಗೆ ಏನಾದರೂ ನ್ಯಾಯ ದೊರೆಕಿಸಿಕೊಡುತ್ತೀರಾ ಎಂದು ಕೇಳಿದಮೇಲೆ ನಾವು ಈ ಪ್ರಶ್ನೆಯನ್ನು ಕೇಳಿದ್ದೇವೆ. 64 ಕೋಟಿ ರೂಪಾಯಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ 60 ಕೋಟಿ ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ.

ಇಂಥ ಸಂದರ್ಭದಲ್ಲಿ ಸರಕಾರದವರು ಕೈಹಾಕದಿದ್ದರೆ, ಈಗ ಮಾಡುತ್ತಿರುವ ದುರುಪಯೋಗ ಇನ್ನೂ ಜಾಸ್ತಿಯಾಗಿ ಅನೇಕ ಸೊಸೈಟಿಗಳು ಸುಪರ್‌ಸೀಡ್ ಮಾಡಿಬಿಟ್ಟು ಕೋಟ್ಯಾಂತರ ರೂಪಾಯಿಗಳನ್ನು ಹೊಡೆಯುವುದರಲ್ಲಿ ಅವರು ನಿಸ್ಸೀಮರಾಗಿದ್ದಾರೆ. ಆದಕ್ಕೆ ಸರಕಾರದವರು ಏನು ಮಾಡುತ್ತೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಸ್.ಆರ್. ಮೋರೆ : ಈ ಸೊಸೈಟಿಗಳು ಅವ್ಯವಹಾರ ಮಾಡುವುದು ಸರಕಾರದ ಗಮನಕ್ಕೆ ಈಗಾಗಲೇ ಬಂದಿದೆ. ಆದ್ದರಿಂದ ಇಂಥ ಅವ್ಯವಹಾರಗಳನ್ನು ಹೋಗಲಾಡಿಸಲು ಕ್ಯಾಬಿನೆಟ್ ಸಬ್‌ಕಮಿಟಿಯೊಂದನ್ನು ಈ ವಿಚಾರಗಳನ್ನು ಪರಿಶೀಲಿಸಿ ಒಂದು ಮಾಡಲ್‌ಬೈಲಾ ಮಾಡಬೇಕೆಂದು ಮಾಡಿದ್ದೇವೆ. ಅದರ ಎರಡು ಮೂರು ಸಿಟ್ಟಿಂಗ್ ಕೂಡ ಆಗಿದೆ. ಇನ್ನೊಂದು ಸಿಟ್ಟಿಂಗ್‌ನಲ್ಲಿ ಅದನ್ನು ಮುಗಿಸಿ ಒಂದು ಮಾಡಲ್ ಬೈಲಾವನ್ನು ಮಾಡಿ ಆದಷ್ಟೂ ಇಂಥ ಅವ್ಯವಹಾರ ಮಾಡುವ ಸೊಸೈಟಿಗಳ ಮೇಲೆ ಯಾವರೀತಿಯಲ್ಲಿ ಅವರ ಮೇಲೆ ಕ್ರಮತೆಗೆದುಕೊಳ್ಳ ಬಹುದೆಂದು ನೋಡಿ, ನಮ್ಮ ಸೊಸೈಟಿಯ ಸದಸ್ಯರಿಗೆ ಅನುಕೂಲ ಮತ್ತು ನ್ಯಾಯ ಒದಗಿಸುವ ನೀತಿಯನ್ನು ನಾವು ಜಾರಿಗೆ ತರುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಮುಂದೆ ಕ್ರಮತೆಗೆದುಕೊಳ್ಳುವುದು ಬೇರೆ ಆದರೆ ಈಗ ಏನು 64 ಕೋಟಿ ರೂಪಾಯಿಗಳ ಹಣದ ದುರುಪಯೋಗ ಆಗಿದೆ, ಆದರ ಶೇರುದಾರರಿಗೆ ನ್ಯಾಯ ದೊರಕಿಸಿಕೊಡಲು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್.ಆರ್. ಮೋರೆ : ಈ 64 ಕೋಟಿ ರೂಪಾಯಿಯೊಳಗೆ ಅಲ್ಲಿ ಕ್ಯಾಶ್‌ಬ್ಯಾಲನ್ಸ್ ಏನೂ ಅಲ್ಲಿ ಇಲ್ಲ. ತಾವುಗಳು ಹೇಳಿದ ಹಾಗೆ ಅವ್ಯವಹಾರ ಮಾಡಿದ್ದಾರೆ. ಸ್ಪೆಶಲ್ ಆಫೀಸರ್‌ಗೆ ನಾನು ಹೇಳಿದ್ದೇನೆ, ಯಾವ ಸೊಸೈಟಿಯಲ್ಲಿ ಎಷ್ಟೆಷ್ಟು ಹಣ ಇದೆ ಎಂದು ನೋಡಲು, ಅದನ್ನು ಅಧ್ಯಯನ ಮಾಡಿದ ಮೇಲೆ ಯಾರಿಗೆ ಬಹಳ ಕಷ್ಟ ಇದೆ ಅದನ್ನು ನೋಡಿಕೊಂಡು ಅವರು ಅರ್ಜಿಮುಖಾಂತರ ವಿನಂತಿ ಮಾಡಿಕೊಂಡರೆ ಅವರಿಗೆ ವಾಪಸ್ ಕೊಡುವುದಕ್ಕೆ ನಾನು ಏರ್ಪಾಡು ಮಾಡುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಸಹಕಾರಿ ಸಂಸ್ಥೆಗಳಲ್ಲಿರತಕ್ಕಂಥ ಹಣ ಸಾರ್ವಜನಿಕರ ಹಣ. ಅದರಲ್ಲಿ ಅವ್ಯವಹಾರ ಆಗಿರುವುದು ನನಗೆ ಗೊತ್ತಾಗಿದೆ ಎಂದು ಮಂತ್ರಿಗಳೇ ಒಪ್ಪಿಕೊಳ್ಳುತ್ತಿದ್ದಾರೆ. ಈಗ ಇರತಕ್ಕಂಥ ಕಾನೂನುಗಳನ್ನು ಉಪಯೋಗಿಸಿಕೊಂಡು ಅವುಗಳನ್ನು ಸೂಪರ್‌ಸೀಡ್ ಮಾಡಬೇಕೆಂದು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಅಡ್ಮಿನಿಸ್ಟ್ರೇಟರ್‌ಗಳಿಗೆ ಅವರ ಸ್ವಾಧೀನಕ್ಕೆ ಈ ಸೊಸೈಟಿಗಳನ್ನು ಕೊಟ್ಟಿದ್ದೀರೋ ಹೇಗೆ? ಕೊಡದೇ ಇರುವುದಕ್ಕೆ ಕಾನೂನಿನಲ್ಲಿರುವ ಅಡ್ಡಿ ಆತಂಕಗಳು ಏನು?

ಶ್ರೀ ಎಸ್.ಆರ್. ಮೋರೆ : ಈಗಾಗಲೇ ನಮ್ಮ ಸ್ಪೆಶಲ್ ಆಫೀಸರ್ ಚಾರ್ಜ್‌ನ್ನು ತೆಗೆದುಕೊಂಡಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಬೆಂಗಳೂರು ನಗರದಲ್ಲಿರತಕ್ಕಂಥ ಎಷ್ಟು ಸೋಸೈಟಿಗಳು ಅವರ ಸ್ವಾಧೀನದಲ್ಲಿದ್ದಾವೆ?

ಶ್ರೀ ಎಸ್.ಆರ್. ಮೋರೆ : ಆರು ಸೊಸೈಟಿಗಳನ್ನು ಏನು ಸೂಪರ್‌ಸೀಡ್ ಮಾಡಿದ್ದೇವೆ, ಆ ಆರು ಸೊಸೈಟಿಗಳನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ : ವಿಶ್ವಭಾರತಿ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಆದರೆ ಅಲ್ಲಿಯ ಕೃಷ್ಣಬಟ್ಟ ಎನ್ನುವವರು ತಾನೇ ಎಕ್ಸಿಕ್ಯೂಟಿವ್ ಡೈರೆಕ್ಟರ್ ಎಂದುಕೊಂಡು ತಾನೇ ವ್ಯವಹಾರಗಳನ್ನು ನಡೆಸಿಕೊಂಡು ಅವ್ಯವಹಾರವನ್ನು ಮಾಡುತ್ತಾ ಇದ್ದಾನೆ. ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಅವರು ಲಕ್ಷಾಂತರ ರೂಪಾಯಿಗಳನ್ನು ಇನ್ನೂ ಲೂಟಿ ಮಾಡುತ್ತಾ ಇದ್ದಾರೋ.. ಜನಗಳಿಗೂ ಬಹಳ ತೊಂದರೆ ಕೊಡುತ್ತಾ ಇದ್ದಾರೆ.. ಗಿರಿನಗರದಲ್ಲಿನ ನಿವಾಸಿಗಳಿಗೂ ತೊಂದರೆ ಕೊಡುತ್ತಾ ಇದ್ದಾರೆ. ಸ್ಪೆಷಲ್ ಆಫೀಸರ್ ಗಮನಕ್ಕೆ ಕೂಡ ಈ ವಿಚಾರವನ್ನು ಗಮನಕ್ಕೆ ತಂದಿದ್ದಾರೆ.

ಶ್ರೀ ಎಸ್.ಆರ್. ಮೋರೆ : ಇದರ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆಯನ್ನು ಹಾಕಲಿ,

ಏಕೆಂದರೆ ಅದರಲ್ಲಿ ಬಹಳ ಹಗರಣ ಇದೆ ಎಂದು ಕಾಣುತ್ತದೆ. ಪ್ರತ್ಯೇಕ ಪ್ರಶ್ನೆ ಹಾಕಿದರೆ ಅದಕ್ಕೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಕೃಷ್ಣಭಟ್ಟರಿಗೆ ಪ್ರತ್ಯೇಕ ಪ್ರಶ್ನೆ ಹಾಕಬೇಕೆಂದು ಹೇಳುತ್ತೀರಾ? ನಿಮ್ಮ ಉತ್ತರದಲ್ಲಿ ಮೊದಲನೆ ಸ್ಥಾನವನ್ನು ವಿಶ್ವಭಾರತಿ ಗೃಹನಿರ್ಮಾಣ ಸಹಕಾರ ಸಂಘಕ್ಕೆ ಕೊಟ್ಟಿದ್ದೀರಿ, ಅದರ ವಿಚಾರಗಳು ; ವಿವರಗಳು ನಿಮ್ಮಲ್ಲಿ ಇರಬೇಕಲ್ಲ? ಅಲ್ಲಿ ಅಡ್ಮಿನಿಸ್ಟ್ರೇಟರ್ ನೇಮಕ ಮಾಡಿದ್ದೀರಲ್ಲ?

ಶ್ರೀ ಎ.ಕೆ. ಅನಂತಕೃಷ್ಣ : ಇದ್ದಾರೆ, ಅವರು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡರು; ಅದೂ ಕ್ಯಾನ್ಸಲ್ ಆಯಿತು. ಸ್ಟೇ ವೆಕೇಟ್ ಮಾಡಿಯೂ ಆಯಿತು. ಆದರೂ ಕೂಡ ಅವರು ಎಕ್ಸಿಕ್ಯುಟಿವ್ ಡೈರೆಕ್ಟರ್ ತರಹ ವ್ಯವಹಾರಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಶ್ರೀ ಎಸ್.ಆರ್. ಮೋರೆ : ಇದರ ಬಗ್ಗೆ ಪ್ರತ್ಯೇಕ ಮಾಹಿತಿ ಇಲ್ಲ, ತರಿಸಿಕೊಡುತ್ತೇನೆ.

ಅಧ್ಯಕ್ಷರು : ಅಂದರೆ ನಿಮಗೆ ನೋಟೀಸ್ ಬೇಕು;

ಶ್ರೀ ವಾಟಾಳ್ ನಾಗರಾಜ್ : ಆ ಕೃಷ್ಣಭಟ್ಟರು ಹೇಗೆ ಅಂದರೆ, ನಾವು ಈ ಸದನದಲ್ಲಿ ಒಂದು ಪ್ರಶ್ನೆಯನ್ನು ಎತ್ತಿದಾಗಲೂ ಕೂಡ ಸದನಕ್ಕೆ ವಿರುದ್ಧವಾಗಿ ಪತ್ರಿಕೆಗಳಲ್ಲಿ ಜಾಹೀರಾತುಗಳ ಮೂಲಕ ಹೇಳಿಕೆಗಳನ್ನು ಕೊಡತಕ್ಕಂಥಾದ್ದು ಅನೇಕರಿಗೆ ಗೊತ್ತಿದೆ, ತಮ್ಮ ಗಮನಕ್ಕೂ ಇದು ಬಂದಿರಬಹುದು. ಈ ಸಂಸ್ಥೆಯ ಬಗ್ಗೆ ಸಮಗ್ರವಾದ ತನಿಖೆ ನಡೆಸಿ ಅದನ್ನು ಮುಚ್ಚತಕ್ಕಂಥ ವ್ಯವಸ್ಥೆಯನ್ನು ಧೈರ್ಯ ಇದ್ದರೆ ಸರಕಾರ ಮಾಡುತ್ತದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಎಸ್.ಆರ್. ಮೋರೆ : ಸರಕಾರಕ್ಕೆ ಧೈರ್ಯ ಇದೆ. ಧೈರ್ಯ ಇಲ್ಲದಿದ್ದರೆ ಸೂಪರ್‌ಸೀಡ್ ಮಾಡುವ ಗೋಜಿಗೆ ಹೋಗುತ್ತಾ ಇರಲಿಲ್ಲ.

ಅಧ್ಯಕ್ಷರು : ಧೈರ್ಯ ಇಲ್ಲದಿದ್ದರೆ ಸೂಪರ್‌ಸೀಡ್ ಮಾಡುವ ಗೋಜಿಗೆ ಹೋಗುತ್ತಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಇವೊತ್ತು ಕೃಷ್ಣಭಟ್ ಎನ್ನುವಂಥವರು ಒಂದು ಪುಸ್ತಕವನ್ನು ಪ್ರಿಂಟ್ ಮಾಡಿದ್ದಾರೆ, ನಾವು ಇಲ್ಲಿ ಅನೇಕ ಪ್ರಶ್ನೆಗಳನ್ನು ಕೇಳಿದರೆ ಎಲ್ಲಾ ಎಲ್ಲಾ ಪಕ್ಷದವರಿಗೆ ದುಡ್ಡು ಕೊಟ್ಟು ನನ್ನಿಂದ ಅವರು ಜೀವನ ನಡೆಸುತ್ತಿದ್ದಾರೆ ಎಂದು ಅದರಲ್ಲಿ ಪ್ರಿಂಟ್ ಮಾಡಿದ್ದಾರೆ. ಅದು ಅವರ ಹಣದ ಬಲದಿಂದ. ಇಂಥ ಸೊಕ್ಕಿನಿಂದ ಹಣದ ಬಲದಿಂದ ಏನನ್ನು ಬೇಕಾದರೂ ಜಯಿಸಬಲ್ಲೆ ಎನ್ನುವಂಥವರಿಗೆ ಹೀಗೆ ಜನರಿಗೆ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ, ಜನಕ್ಕೆ ಟೋಪಿ ಹಾಕುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಮನದಟ್ಟು ಮಾಡಿಕೊಂಡು ಸೂಕ್ತ ಕ್ರಮವನ್ನು ಸರಕಾರದವರು ತೆಗೆದುಕೊಳ್ಳಬೇಕು.

ನೀವು ಇದರ ಬಗ್ಗೆ ದಿಟ್ಟನಿಲುವನ್ನು ತೆಗೆದುಕೊಳ್ಳಬೇಕು. ಸನ್ಮಾನ್ಯ ಮುಖ್ಯ ಮಂತ್ರಿಗಳು ಸರಿಯಾಗಿ ಇದನ್ನುಪರಿಗಣಿಸಿ ಇದರ ಬಗ್ಗೆ ತಾವು ಚರ್ಚೆಗೆ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನೋಟೀಸನ್ನು ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಂಗನಾಥ್‌ರವರು ಮಂತ್ರಿಗಳಾಗಿದ್ದಾಗ ಅವನನ್ನು ಜೈಲಿಗೆ ಕಳುಹಿಸಿದ್ದರು. ಅವನು ಅವರ ಕಾರ್ಯಾಲಯಕ್ಕೆ ಬಂದಾಗ ಪೋಲೀಸರನ್ನು ಕರೆಸಿ ಅರೆಸ್ಟ್ ಮಾಡಿಸಿದ್ದರು. ಇದು ಸಂತೋಷಪಡತಕ್ಕಂಥದ್ದು.

ಶ್ರೀ ಕೆ.ಹೆಚ್. ರಂಗನಾಥ್ : ಕಾನೂನು ಕಳುಹಿಸಿದ್ದು. ನಾನು ಏತಕ್ಕೆ ಕಳುಹಿಸಲಿ.

ಶ್ರೀ ಎ.ಕೆ. ಅಸಂತಕೃಷ್ಣ : ಆತ ಪ್ರತಿನಿತ್ಯ ಜನರಿಗೆ ಹೆರಾಸ್ ಮಾಡುತ್ತಿದ್ದಾನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಬಗ್ಗೆ ಇಡೀ ಸದನದ ಅಭಿಪ್ರಾಯ ಒಂದಾಗಿದೆ. ಅದಕ್ಕೋಸ್ಕರ ಇಂಥ ಅವ್ಯವಹಾರವನ್ನು ಮಾಡುವಂಥ ಇಂಥ ಖದೀಮರಿಗೆ ಪಾಠ ಕಲಿಸತಕ್ಕಂಥ ಪ್ರಯತ್ನವನ್ನು ನೀವು ಮಾಡಬೇಕು. ಅದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ತಾವು ಆ ಪುಸ್ತಕವನ್ನು ತೆಗೆದುಕೊಂಡು ನೋಡಿ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ಕೃಷ್ಣಭಟ್ಟ ಸಹಕಾರ ಸಂಘದ ಬಗ್ಗೆ ವಿಚಾರಣೆಯನ್ನು ಮಾಡುವುದಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳು

ಹೋದಾಗ ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ಸಭೆಯ ಮುಂದೆ ಇಟ್ಟರೆ ಸಾಕು. ಈಗ ಏನು ಈ ದುರ್ವ್ಯವಹಾರ ನಡೆಯುತ್ತಿದೆ, ಇದಕ್ಕೆಲ್ಲಾ ನಾವು ಏನೇನು ಮಾಡಿದ್ದೇವೆ ಎನ್ನುವುದನ್ನು ಬಹಳ ಸೂಕ್ಷ್ಮವಾಗಿ ಸೂಚ್ಯವಾಗಿ ಹೇಳಿದ್ದಾರೆ. ಅಷ್ಟೇ ಅಲ್ಲ, ಇವತ್ತಿನ ದಿವಸ ಏನು ಆರು ಸಹಕಾರ ಸಂಘಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ನುಾಡಿದ್ದಾರೆ, ಯಾವುದಾದರೂ ಸಹಕಾರಿ ಸಂಘವನ್ನು ಇವರು ಸರಿಪಡಿಸುವುದಕ್ಕೆ ಕ್ರಮವನ್ನು ಕೈಗೊಂಡಿದ್ದಾರೆಯೇ ಎಂದು ಕೇಳುತ್ತೇನೆ. ಇವರ ಕೈಯಲ್ಲಿ ಭಾರ್ಜನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ, ಅವರು ಏನು ತಪ್ಪುಮಾಡಿದ್ದಾರೆ ಎಂದು ಅವರು ಬರೆದುಕೊಟ್ಟಿದ್ದಾರೆ ನಾನು ಇಂಥ ತಪ್ಪನ್ನು ಇಂಥದ್ದಕ್ಕೋಸ್ಕರ ಮಾಡಿದ್ದೇನೆ ಎಂಬ ಮಾತನ್ನು ಹೇಳಿದ್ದಾರೆ. ಅದರೂ ಕೂಡಾ ಸರ್ಕಾರ ಸುಮ್ಮನೆ ಇದೆ ಎಂದರೆ It amounts to connivance and nothing else.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಸರ್ಕಾರ ಏನು ಸುಮ್ಮನೆ ಕುಳಿತಿಲ್ಲ. ಅದಕ್ಕೆ ಈಗಾಗಲೇ ಏನು ಕ್ರಮವನ್ನು ತೆಗೆದುಕೊಳ್ಳಬೋಕೋ ಅದನ್ನು ತೆಗೆದುಕೊಂಡಿದೆ.

ಶ್ರೀ ಹೆಚ್. ವಿಕಾಂತಯ್ಯ : ನೀವು ಈ ಆರು ಸಹಕಾರ ಸಂಘಗಳ ಪೈಕಿ ಎರಡು ಸಹಕಾರ ಸಂಘಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ್ದರೂ ಸಹಾ ಇವತ್ತಿನವರೆಗೂ ಸಹಾ ಸಂಬಂಧಪಟ್ಟವರಿಂದ ಪ್ರಭಾರವನ್ನು ಉಳಿಸಿಕೊಳ್ಳುವುದಕ್ಕೆ ಆಗಿಲ್ಲ, ಪೋಲೀಸರನ್ನು ಕೇಳಿದರೆ, ಪೋಲೀಸರು ನಿಮಗೆ ಸಹಕಾರವನ್ನು ಕೊಟ್ಟಿಲ್ಲ. ಅದನ್ನು ನಾನು ಹೇಳುತ್ತಿಲ್ಲ, ನಿಮ್ಮ ಆಡಳಿತಾಧಿಕಾರಿಗಳು ನಿಮಗೆ ಈ ಬಗ್ಗೆ ಪತ್ರವನ್ನು ಬರೆದಿದ್ದಾರೆ. ಇದರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ?

MR. SPEAKER : Perhaps what you mean is the administrators. Are they ineffective to take charge of these societies?

ಶ್ರೀ ವಾಟಾಳ್ ನಾಗರಾಜ್ : ಕರೆಕ್ಟ್ ಸಾರ್.

ಅಧ್ಯಕ್ಷರು : ಈಗ ವಾಟಾಳ್ ನಾಗರಾಜ್‌ರವರು ಕರೆಕ್ಟ್ ಎಂದು ಹೇಳಿದ ಮೇಲೆ ಅದು ಕರೆಕ್ಟ್ ಆಗಿರಲೇಬೇಕು.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಮಾತಿಗೆ ನಾನು ಸಹಮತವನ್ನು ಕೊಡುತ್ತಿದ್ದೇನೆ. ಇದು ತಮಗೇ ಗೊತ್ತಿದೆ.

MR. SPEAKER : I have framed the question in the manner so that he can give a satisfactory answer to the House.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಸರ್ಕಾರ ಅದನ್ನು ಸೂಪರ್‌ಸೀಡ್ ಮಾಡಿದಮೇಲೆ ಸ್ಪೆಷಲ್ ಆಫೀಸರ್ ಅಲ್ಲಿಗೆ ಹೋಗಿ ಭಾರ್ಜನ್ನು ತೆಗೆದುಕೊಳ್ಳುವುದಕ್ಕೆ ಹೋದಾಗ ಸ್ವಲ್ಪ ಮೊದಲು ಎರಡು ದಿನ ತೊಂದರೆಯಾಯಿತು. ಆಮೇಲೆ ಅವರು ಪೋಲೀಸ್ ಪ್ರೊಟೆಕ್ಷನನ್ನು ಕೇಳಿದರು. ಆಮೇಲೆ ನಾನು ಪೋಲೀಸರಿಗೆ ಡೈರೆಕ್ಷನನ್ನು ಕೊಟ್ಟಿದ್ದೇನೆ. ಆ ಪ್ರಕಾರ ಅವರು ಭಾರ್ಜನ್ನು ತೆಗೆದುಕೊಂಡಿದ್ದಾರೆ. ಈಗ ಸರಿಯಾಗಿ ನಡೆಯುತ್ತಿದೆ. ಒಂದೊಂದೇ ವಿವರಗಳು ಬರುತ್ತಿವೆ. ಅದು ಬಂದ ಮೇಲೆ ನೀವು ಸೂಚನೆಯನ್ನು ಕಳುಹಿಸಿದರೆ ಸ್ಪೀಕರ್‌ರವರು ಅಲೋ ಮಾಡಿದರೆ, ಇದರ ಬಗ್ಗೆ ಬೇಕಾದರೆ ಚರ್ಚೆಯಾಗಲಿ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ನಮ್ಮ ಪ್ರಶ್ನೆ ನಿಮ್ಮ ಪ್ರಶ್ನೆ ಎಂದು ಇಲ್ಲ. ಈ ನಾಲ್ಕು ಸಹಕಾರ ಸಂಘಗಳ ಪೈಕಿ ಎರಡು ಸಹಕಾರಿ ಸಂಘಗಗಳಿಗೆ ತಾವು ಏನು ಸ್ಪೆಷಲ್ ಆಫೀಸರನ್ನು ನೇಮಕ ಮಾಡಿದ್ದೀರಿ, ಆಡಳಿತ ಮಂಡಲಿಯನ್ನು ರದ್ದು ಮಾಡಿ ಏನು ಮಾಡಿದ್ದೀರಿ, ಅವರು ಇಲ್ಲಿಯವರೆಗೆ ಪ್ರಭಾರವನ್ನು ವಹಿಸಿಕೊಟ್ಟಿದ್ದಾರೆಯೇ? ಆ ಪ್ರಭಾವವನ್ನು ವಹಿಸಿಕೊಟ್ಟಿಲ್ಲದೆ ಇರುವುದರಿಂದ ದಿನನಿತ್ಯದ ಆಡಳಿತವನ್ನು ನಿಮ್ಮ ಆಡಳಿತಾಧಿಕಾರಿಗಳು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಬದಲಾಗಿ ಆಡಳಿತ ಕಮಿಟಿ ಮೊದಲು ಏನಿತ್ತು, ಅವರು ಇವತ್ತಿಗೂ ಸಹಾ ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ ನೀವು ಭೂಮಿಯನ್ನು ಬಿಟ್ಟಕೊಟ್ಟಿದ್ದೀರಿ. After they are superseded, the possession of the land has been handed over to the old committee and not the Administrator.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಆಡಳಿತಾಧಿಕಾರಿ ಕೃಷ್ಣಭಟ್ಟನ ಮನೆಗೆ ಹೋಗಿ ಏನು ಮಾಡಬೇಕು ಎಂದು ಕೇಳಿಕೊಂಡು ಬರತಕ್ಕಂಥ ಪರಿಸ್ಥಿತಿ ಇದೆ. ದಯಮಾಡಿ ಕರೆಸಿ ನೋಡಿ. ಕರೆಸಿ ಕೇಳಿ ನೋಡಿ. ಅದು ಹೌದೋ ಅಲ್ಲವೋ ಎನ್ನುವುದನ್ನು ನೋಡಿ.

(ಗೊಂದಲ)

ಅಧ್ಯಕ್ಷರು : ಆರ್ಡರ್. ಆರ್ಡರ್.

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ : ಇವತ್ತಿನವರೆಗೂ ಅಲ್ಲಿ ಅತನೇ ಸೈಟನ್ನು ವಿಲೇವಾರಿ ಮಾಡುತ್ತಿದ್ದಾನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಇವತ್ತು ಸಹಕಾರಿ ಸಂಘಗಳು ಏನು ಇವೆ, ಈಗಾಗಲೇ ಈ ಪ್ರಶ್ನೆಗೆ ಈ ಸದಸದಲ್ಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ. ಏಕೆಂದರೆ ಅವಿಶ್ವಾಸ ನಿರ್ಣಯದ ಚರ್ಚೆ ಬಂದಾಗ ಈ ಪ್ರಶ್ನೆ ಉದ್ಭವವಾಗಿತ್ತು. ನಾನು ಉತ್ತರವನ್ನು ಕೊಟ್ಟಿದ್ದೇನೆ. ಈ ಗೃಹನಿರ್ಮಾಣ ಸಹಕಾರ ಸಂಘಗಳ ವಿಚಾರದಲ್ಲಿ ಅದು ಕ್ಯಾಬಿನೆಟ್ ಸಬ್ ಕಮಿಟಿಯ ಮುಂದೆ ಇದೆ. ಅದರ ಮುಂದೆ ಎಲ್ಲಾ ವಿಚಾರಗಳನ್ನು ನಾವು ಇಟ್ಟುಕೊಂಡಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ಮೊದಲೇ ತಿಳಿಸಿದ್ದೇನೆ. ಇದು ಡಿಸಿಷನ್ ನಂಬರ್ 1. ಯಾವ ಯಾವ ಸಹಕಾರ ಸಂಘಗಳಿಗೆ ಅಡ್ಮಿನಿಸ್ಟ್ರೇಟರ್, ವಗೈರೆ ಹಾಕತಕ್ಕಂಥದ್ದು ಸರ್ಕಾರದ ವತಿಯಿಂದ ನಡೆದಿದೆ, ಅವುಗಳ ಬಗ್ಗೆ ಕೆಲವು ಕಂಪ್ಲೇಂಟ್ಸ್‌ಗಳು ಕೂಡಾ ಬಂದಿದೆ. ಅದರ ಆಧಾರದ ಮೇಲೆ ನಡೆಯತಕ್ಕಂಥ ವಿಚಾರ ಇದೆ. ಅವುಗಳನ್ನು ಕೂಡಾ ಒಳಗೊಂಡಂತೆ ನಮ್ಮ ಸಮಿತಿ ಅದನ್ನು ವಿಚಾರ ಮಾಡುತ್ತದೆ. ಇದು ಎರಡನೆಯದು. ಮತ್ತೆ ಮೂರನೆಯ ವಿಚಾರವೆಂದರೆ, ಭೂಮಿಯನ್ನು ಏನು ಕೊಟ್ಟಿದ್ದೀರಿ ಎಂಬ ಮಾತನ್ನು ಹೇಳಿದ್ದೀರಿ, ಅದರ ಬಗ್ಗೆ ಹೇಳಬೇಕಾದರೆ ನಾವು ಯಾವುದೇ ಭೂಮಿಯನ್ನು ಈ ಸಹಕಾರ ಸಂಘಗಳಿಗೆ ಕೊಡತಕ್ಕ ಪ್ರಶ್ನೆಯೂ ಇಲ್ಲ. ಇದು ಮೊದಲೇ ಕೊಟ್ಟು ಹೋಗಿರತಕ್ಕದ್ದು.

ಶ್ರೀ ಹೆಚ್. ಏಕಾಂತಯ್ಯ : ಈ ಸಹಕಾರ ಸಂಘಗಳಿಗೆ ಆಡಳಿತ ಅಧಿಕಾರಿಯನ್ನು ನೇಮಕಮಾಡಿದಮೇಲೆ ಹಳೆಯ ಸಮಿತಿಯವರಿಗೆ ಈ ಭೂಮಿಯ ಸ್ವಾಧೀನವನ್ನು ವಹಿಸಿಕೊಟ್ಟಿದ್ದಾರೆ. ಗೌರ್ನಮೆಂಟ್ ಆರ್ಡರ್ ಮೂಲಕವೇ ಕೊಟ್ಟಿದ್ದೀರಿ.

ಶ್ರೀ ಎಸ್. ಬಂಗಾರಪ್ಪ : ಭೂಮಿಯನ್ನು ಕೊಡತಕ್ಕ ಪ್ರಶ್ನೆಯು ಇಲ್ಲಿ ಉದ್ಭವಿಸುವುದಿಲ್ಲ, ಅದು ತಮ್ಮ ತಪ್ಪು ಗ್ರಹಿಕೆ ಇರಬಹುದು. ಏನಾದರೂ ಮಾಹಿತಿ ಇದ್ದರೆ, ತಾವು ಒದಗಿಸಿ ಕೊಟ್ಟರೆ, ನಾವು ಸೂಕ್ತ ಉತ್ತರವನ್ನು ಅದಕ್ಕೆ ಕೊಡುತ್ತೇವೆ. ಏಕೆಂದರೆ ನಾನು ಪದೇ ಪದೇ ಈ ವಿಚಾರವನ್ನು ಹೇಳಿದ್ದೇನೆ. ಯಾವುದೇ ಸಹಕಾರ ಸಂಘಗಳು, ಮತ್ತೊಂದು. ಇರಲಿ, ನಾವು ಸಹಾಯ ಮಾಡತಕ್ಕ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಇವತ್ತು ಅವರು ಜನರಲ್ ಬಾಡಿ ಮೀಟಿಂಗ್ ಮತ್ತೊಂದು ಮಾಡಿಕೊಳ್ಳುವುದು ಬಿಟ್ಟರೆ ಬೇರೆ ಯಾವುದೇ ರೀತಿಯಲ್ಲಿ ಈ ಭೂಮಿಯ ವ್ಯವಹಾರ ಮಾಡಲು ನಾವು ಬಿಟ್ಟಿಲ್ಲವೆಂಬ ಮಾತನ್ನು ಈ ಸದನದಲ್ಲಿ ಹೇಳಿದ್ದೇನೆ. ಇಷ್ಟು ಹೇಳಿದಮೇಲೆ ಈ ಪ್ರಶ್ನೆ ಉದ್ಭವಿಸುವುದಿಲ್ಲ, ತಮ್ಮ ಹತ್ತಿರ ಮಾಹಿತಿ ಏನಾದರೂ ಇದ್ದರೆ ಕಳುಹಿಸಿಕೊಡಿ, ಆ ಮಾಹಿತಿಯ ಆಧಾರದಮೇಲೆ ಸದನದಲ್ಲಿ ಉತ್ತರವನ್ನು ಕೊಡುತ್ತೇನೆ. ಅಥವಾ ತಮಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಭೂಮಿಯನ್ನು ಅವರು ಕೊಟ್ಟಿದ್ದಾರೆಂಬ ಪ್ರಶ್ನೆ ಅಲ್ಲ. ಅವರ ಸ್ವಾಧೀನದಲ್ಲಿ ಇರತಕ್ಕ ಭೂಮಿಯನ್ನು ಸೈಟ್ ಮಾಡಿ ಮಾರುತ್ತಿದ್ದಾರೆಂಬುದು ಈಗ ಇರತಕ್ಕ ಪ್ರಶ್ನೆ.

(ಪ್ರಶ್ನೆ ಸಂಖ್ಯೆ : 522 (2807)

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಹೀಗಿದೆ. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನಲ್ಲಿರುವ ಪ್ರಾಥಮಿಕ, ಮಾಧ್ಯಮಿಕ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಶಿಕ್ಷಕರ ಕೊರತೆ ಇದೆಯೇ, ಹಾಗಿದ್ದಲ್ಲಿ ವಿವರವನ್ನು ಒದಗಿಸುವುದು. ಶಿಕ್ಷಕರ ಕೊರತೆಗೆ ಸರ್ಕಾರ ಕೈಗೊಂಡಿರುವ ಕ್ರಮ ಏನು ಎಂದು ಅದಕ್ಕೆ ಉತ್ತರ ಹೀಗಿದೆ, ಪ್ರಾಥಮಿಕ ಮಾಧ್ಯಮಿಕ ಶಾಲಾ ಶಿಕ್ಷಕರು 98,ಪ್ರೌಢಶಾಲೆ ಶಿಕ್ಷಕರು 30,ಪ್ರಥಮ ದರ್ಜೆಯ ಕಾಲೇಜು ಉಪನ್ಯಾಸಕರು 11, ಕಿರಿಯ ಕಾಲೇಜು ಉಪನ್ಯಾಸಕರು 4. ಇಷ್ಟು ಹುದ್ದೆಗತಳು ಖಾಲಿ ಇದ್ದು, ಕೊರತೆಯನ್ನು ನಿವಾರಣೆ ಮಾಡಲು ಸರ್ಕಾರ ಹೇಗೆ ಕ್ರಮ ಕೈಗೊಂಡಿದೆ ಅಂದರೆ ಪ್ರೌಢ ಶಾಲೆಯಲ್ಲಿ ಖಾಲಿಯಿರುವ ಸಹಾಯಕ ಶಿಕ್ಷಕರ ಹುದ್ದೆಯನ್ನು ಶೇಕಡ 25ರಷ್ಟು, ಪ್ರಾಥಮಿಕ ಶಾಲೆಗಳಲ್ಲಿರುವ ತರಬೇತಿ ಹೊಂದಿದ ಪದವೀದರರಿಂದ ಶೇಕಡ 40 ರಷ್ಟನ್ನು ಮಿತವೇತನ ಪದವೀದರರಿಂದ ಮತ್ತು ಉಳಿದ ಸ್ಥಾನವನ್ನು ನೇರ ನೇಮಕಾತಿಯಿಂದ ತುಂಬಲಾಗುವುದು. ಇದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾರೆ. ಈ ಕೆಲಸವನ್ನು ಯಾವಾಗ ಮಾಡುತ್ತಾರೆ. 135 ಶಿಕ್ಷಕರ ಕೊರತೆ ಇಡೀ ತಾಲ್ಲೂಕಿನಲ್ಲಿದೆ, ನಾವು ಶಾಸನ ಸಭೆಯಲ್ಲಿ ಪ್ರಶ್ನೆ ಕೇಳಿದಾಗ...

ಅಧ್ಯಕ್ಷರು : ಇದಕ್ಕೆ ಉತ್ತರವನ್ನು ಆಗಲೇ ಹೇಳಿದ್ದಾರೆ. ಆದ್ದರಿಂದ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀಮತಿ ಮೋಟಮ್ಮ : ಇನ್ನೊಂದು ಪ್ರಶ್ನೆ ಇದೆ.

ಅಧ್ಯಕ್ಷರು : ನೀವು ಏನೇ ಕಲ್ಪಿಸಿಕೊಂಡು ಕೇಳಿದರೂ ಉತ್ತರವನ್ನು ಈಗಾಗಲೇ ಹೇಳಿದ್ದಾರೆ.

ಶ್ರೀಮತಿ ಮೋಟಮ್ಮ : ಇಲ್ಲಿ ಕಲ್ಪನೆ ಏನಿಲ್ಲ.

ಅಧ್ಯಕ್ಷರು : 11ಸಾವಿರ ಹುದ್ದೆಗಳನ್ನು ಇನ್ನು ಎರಡು ತಿಂಗಳೊಳಗೆ ಭರ್ತಿಮಾಡುತ್ತೇವೆ. ಆದಾದ 6 ತಿಂಗಳಲ್ಲಿ ಉಳಿದಿದ್ದನ್ನು ಭರ್ತಿ ಮಾಡುತ್ತೇವೆ. ಎಲ್ಲಾ ಶಾಲೆಗಳಿಗೂ ಉಪಾಧ್ಯಾಯರನ್ನು ತುಂಬಿಸುತ್ತೇವೆ ಎಂದು ಹೇಳಿದ್ದಾರೆ, ಇನ್ನು ಕೇಳುವುದು ಏನು ಉಳಿದಿದೆ?

ಶ್ರೀಮತಿ ಮೋಟಮ್ಮ : ಹಣಕಾಸಿನ ಪರಿಮಿತಿ ಇದೆ ಎಂದು ಹೇಳಿದ್ದಾರೆ. 6ತಿಂಗಳೊಳಗೆ ಶಿಕ್ಷಕರ ಕೊರತೆಯನ್ನು ನಿವಾರಣೆ ಮಾಡಲು ಆಯ್ಕೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇಲ್ಲಿ ಏನಿದೆ ಅಂದರೆ, ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಮಿತವ್ಯಯ ಆದೇಶ ಸಡಿಲಿಸಿದ ನಂತರ ಭರ್ತಿ ಮಾಡಲಾಗುವುದು ಎಂದು ಹೇಳುತ್ತಾರೆ. ಹಾಗಾದರೆ ಎಕಾನಾಮಿ ಮೇಜರ್ ಯಾವಾಗ ಲಿಫ್ಟ್ ಆಗುತ್ತದೆ. ಇನ್ನು 6 ತಿಂಗಳೊಳಗೆ ಅದನ್ನು ಮೊದಲು ಸಾಧ್ಯವಾ? ಹಾಗಾದರೆ ಉಳಿದ ವೇಕೆನ್ಸಿಯನ್ನು ಯಾವಾಗ ಭರ್ತಿ ಮಾಡುವುದು?

ಅಧ್ಯಕ್ಷರು : ಎಕನಾಮಿ ಮೇಜರ್ ಅನ್ನು ನೀವು ಯಾವಾಗ ತೆಗೆಯುವುದು?

ಶ್ರೀ ಎಂ. ವೀರಪ್ಪ ಮೊಯಿಲಿ : ಶ್ರೀಮತಿ ಮೋಟಮ್ಮನವರ ಪ್ರಶ್ನೆ ಇದೆ ಎಂದು ತಿಳಿದೇ ನಾನು ಈ ಉತ್ತರವನ್ನು ಕೊಟ್ಟಿದ್ದು ಈಗಾಗಲೇ ಮಿತವ್ಯಯ ಸಡಿಲ ಆಗಿದೆ ಎಂದು. ನಾನು ಹೇಳಿದ್ದೇನೆ. ನೇಮಕಾತಿಗೆ ಎಲ್ಲಾ ಕಾರ್ಯಕ್ರಮವನ್ನು ತೆಗೆದುಕೊಂಡಾಗಿದೆ. ಖಾಲಿ ಹುದ್ದೆಗಳನ್ನು ತುಂಬುತ್ತೇವೆಂದು ಈಗಾಗಲೇ ಹೇಳಿದ್ದೇನೆ.

ನೇಕಾರರ ಪ್ರಾಥಮಿಕ ಸಹಕಾರ ಸಂಘ

2819 - ಶ್ರೀ ಹೆಚ್. ವಿಶ್ವನಾಥ್ (ಕೆ.ಆರ್. ನಗರ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಆಂಗ್ಲದ ಆಧಿಪತ್ಯಕ್ಕೆ ಭಾರತದಲ್ಲಿ ಯಾವ ವರ್ಷ ಸಹಕಾರಿ ಪ್ರಾಥಮಿಕ ಪತ್ತಿನ ಸಂಘಗಳು ಸ್ಥಾಪಿಸುವ ಯೋಜನೆ ಜಾರಿಗೆ ಬಂದಿತು?*

ಆ) *ಈ ಪ್ರಥಮ ಪ್ರಾಥಮಿಕ ಪತ್ತಿನ ಸಹಕಾರಿ ಸಂಘವು ಕರ್ನಾಟಕ ರಾಜ್ಯದ ಧಾರವಾಡ ಜಿಲ್ಲೆಯ ಗದಗ್ ತಾಲ್ಲೂಕಿನ ಕನಗಿಹಾಳ ಗ್ರಾಮದಲ್ಲಿ ಪ್ರಾರಂಭಿಸಲ್ಪಟ್ಟಿರುವುದು ನಿಜವೇ?*

ಇ) *ಈ ಸಂಘದ ಸಂಸ್ಥಾಪಕ ಅಧ್ಯಕ್ಷರ ಸ್ಮರಣಾರ್ಥ ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ ಯಾವ ಕ್ರಮವನ್ನು ತೆಗೆದುಕೊಳ್ಳದಿರಲು ಕಾರಣವೇನು?*

ಈ) *ಈ ಸಂಘದ ಸಂಸ್ಥಾಪಕ ಅಧ್ಯಕ್ಷರ ಸ್ಮರಣಾರ್ಥ ಪ್ರತಿಯೊಂದು ಸಹಕಾರಿ ಸಂಸ್ಥೆಗಳಲ್ಲಿ ಭಾವ ಚಿತ್ರವನ್ನು ಹಾಕುವ ಮತ್ತು ಕೇಂದ್ರ ಸರ್ಕಾರ ಅಂಚೆ ಚೀಟಿಯನ್ನು ಮುದ್ರಿಸಿ ಪ್ರಕಟಿಸುವ ಬಗ್ಗೆ ಶಿಫಾರಸ್ಸು ಮಾಡಿ ಜಾರಿಗೆ ತರಲು ಸರ್ಕಾರ ತೀವ್ರ ಕ್ರಮ ಕೈಗೊಳ್ಳುವುದೇ?*

ಶ್ರೀ ಎಸ್.ಆರ್. ಮೋರೆ, (ಸಹಕಾರ ರಾಜ್ಯ ಸಚಿವರು) :

ಅ) 1901.

ಆ) ನಿಜ.